ನೀವು ಬರೀ ಉತ್ತರವನ್ನು ಹೇಳಿದರೆ ಹೇಗೆ? ನಿಮಗೆ ಅನ್ಯಾಯವಾಗಿದೆ, ಅದನ್ನು ಸರಿಪಡಿಸಿಕೊಡುತ್ತೇವೆಂದು ಹೇಳಬೇಕು.

ಶ್ರೀ ಸಿ. ಎಂ. ಉದಾಸಿ :– ಮುಂದೆ ಅದನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ :– " ಅದನ್ನು ಸರಿಪಡಿಸಿಕೊಡುತ್ತೇವೆ, ನೀವು ಬರೆದುಕೊಡಿ" ಎಂದು ಅವರಿಗೆ ಹೇಳಬೇಕು. ಇಷ್ಟು ಉದ್ದ ಉತ್ತರವನ್ನು ಹೇಳಿದರೂ ಕೂಡ ಅವರಿಗೆ ಗೊತ್ತಾಗುವುದಿಲ್ಲ.

ಶ್ರೀ ಸಿ. ಎಂ. ಉದಾಸಿ :– ಸನ್ಮಾನ್ಯ ಮೇಟಿಯವರಿಗೆ ಇದನ್ನು ಸರಿಪಡಿಸಿ ಕೊಡುವಂತಹ ಕೆಲಸವನ್ನು ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಅವರಿಗೆ ಭರವಸೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಅದನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಹೆಚ್. ವೈ. ಮೇಟಿ :– ಈಗಲೇ ಮಾಡಿಕೊಟ್ಟರೆ ಸಂತೋಷ.

ಶ್ರೀ ಸಿ. ಎಂ. ಉದಾಸಿ :– ಅವರ ಪರವಾಗಿಯೇ ಮಾತನಾಡಿ ಎಲ್ಲವನ್ನು ಸರಿಪಡಿಕೊಂಡಿದ್ದೇನೆ. 3 ಗ್ರಾಮಗಳನ್ನು ಕೊಡುತ್ತೇನೆಂದು ಹೇಳಿದ್ದೇನೆ. ಅದನ್ನು ನಾನು ಸರಿಪಡಿಸುತ್ತೇನೆಂದು ಹೇಳಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಯುನಿವರ್ಸಿಟಿ ಪಬ್ಲಿಕ್ ಶಾಲೆಯ ಅಭಿವೃದ್ಧಿ

293 (1977) ಶ್ರೀ ಪಾಟೀಲ್ ಎಸ್. ಎಸ್. (ಮುಂಡರಗಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಯುನಿವರ್ಸಿಟಿ ವತಿಯಿಂದ ನಡೆಸುತ್ತಿರುವ ಪಬ್ಲಿಕ್ ಸ್ಕೂಲ್, ಧಾರವಾಡ ಇದು ಹಣಕಾಸಿನ ತೊಂದರೆಯಿಂದಾಗಿ ಅಭಿವೃದ್ಧಿ ಕುಂಠಿತವಾಗಿರುವುದು ನಿಜವೇ;

ಆ) ಅಭಿವೃದ್ಧಿ ಹೊಂದದೇ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ನಿಜವೇ;

ಇ) ಈ ಶಾಲೆಯಲ್ಲಿನ ಶಿಕ್ಷಕರ ವಿವರ ನೀಡುವುದು;

ಈ) ಇಲ್ಲಿ ದುಡಿಯುತ್ತಿರುವ ಅತಿಥಿ ಶಿಕ್ಷಕರ ಸಂಖ್ಯೆ ಎಷ್ಟು; ವಿವರ ನೀಡುವುದು;

ಉ) ಅವರನ್ನು ಖಾಯಂ ಗೊಳಿಸಲಾಗುವುದೇ;

ಊ) ಈ ಶಾಲೆಯ ಅಭಿವೃದ್ಧಿಗಾಗಿ ಕ್ರಮ ಕೈಗೊಳ್ಳಲಾಗುವುದೇ (ವಿವರ ನೀಡುವುದು)?

ಶ್ರೀ ಡಿ. ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು):

ಅ) ಹೌದು

ಆ) ಹೌದು

ಇ)

ಪ್ರಾಚಾರ್ಯರು	:	1
ದೈಹಿಕ ಶಿಕ್ಷಕರು	:	2
ಸಹಾಯಕ ಹೌಸ್ ಮಾಸ್ಟರ್	:	1
ಸಹಾಯಕ ಶಿಕ್ಷಕರು'	:	15
ಡ್ರಾಯಿಂಗ್ ಟೀಚರ್	:	1
ಕ್ರಾಫ್ಟ್ ಟೀಚರ್	:	1

ಮ್ಯೂಸಿಕ್ ಟೀಚರ್ ಇಲ್ಲ.

ಈ) ವಿಶ್ವವಿದ್ಯಾಲಯ ಪಬ್ಲಿಕ್ ಸ್ಕೂಲ್‌ನಲ್ಲಿ ದುಡಿಯುತ್ತಿರುವ ಅತಿಥಿ ಶಿಕ್ಷಕರ ಸಂಖ್ಯೆ – 10

ಕ್ರ.ಸಂ	ಹೆಸರು	ಶ್ರೀಮತಿ/ಶ್ರೀ
1	ಜಿ.ಕೆ. ಪಾಟೀಲ್	ಹಿಂದಿ
2.	ಎಂ.ಜಿ. ಪಾವಟೆ	ಕನ್ನಡ
3.	ಹೆಚ್.ಬಿ. ಕಲ್ಲೂರ	ಭೂಗೋಳ ಇತಿಹಾಸ
4.	ಎಸ್. ಎನ್. ಪೂಜಾರಿ	ಇತಿಹಾಸ

5.	ವಿ.ಎಸ್. ಕಡ್ಡಿ	ಸಿ.ಬಿ.ಝಡ್
6.	ಎಫ್.ಎಸ್. ಗೋಲಂದಾಜಿ	ಇಂಗ್ಲೀಷ್
7.	ಆರ್.ವೈ.ಹನಮರ	ಭೂಗೋಳ ಇತಿಹಾಸ
8.	ಎಲ್. ಜಿ. ಭದ್ರಪಾರ	ಕನ್ನಡ ಇತಿಹಾಸ
9.	ಎಸ್.ಎ. ಕನಕರೆಡ್ಡಿ	ಕನ್ನಡ ಇತಿಹಾಸ
10.	ಎನ್. ಬಿ. ಬಿರಾದಾರ	ಕನ್ನಡ

ಉ) ಈ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಊ) ಶಾಲೆಗೆ ಅಗತ್ಯವಿರುವ ಡೆಸ್ಕು, ಆಟದ ಮೈದಾನ, ವಿಜ್ಞಾನ ಪ್ರಯೋಗಾಲಯ, ಕಂಪ್ಯೂಟರ್ ಲ್ಯಾಬ್, ಶಿಕ್ಷಣ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ವಿಶ್ವವಿದ್ಯಾಲಯದಲ್ಲಿ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಕೈಗೊಳ್ಳಲು ನಿರ್ಣಯಿಸಲಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ, ಯೂನಿವರ್ಸಿಟಿ ಪಬ್ಲಿಕ್ ಸ್ಕೂಲ್ ಛೇರ್ಮನ್‌ರವರೇ ಆ ಕೆಲಸವನ್ನು ಮಾಡಿದ್ದಾರೆ. ಇಲ್ಲಿ ಉತ್ತರ ಹೇಗೆ ಇದೆ ನೋಡಿ, ಒಂದು ಯೂನಿವರ್ಸಿಟಿಯಾಗಿ ಒಂದೇ ಒಂದು ಹೈಸ್ಕೂಲ್ ಇದೆ, ಈ ರೀತಿಯಾಗಿ ಧಾರವಾಡದಂತಹ ಸಿಟಿಯೊಳಗಡೆ ನೀವು ಶಾಲೆಯನ್ನು ನಡೆಸಿದರೆ ನನಗೆ ಏನು ತಿಳಿಯುತ್ತದೆಂದರೆ, ನಿಮಗೆ ಅದು ಬರುತ್ತದೆ ಎಂದು ನಾನು ಕಳುಹಿಸಿದ್ದೇನೆ. ಆದರೆ ದುರ್ದೈವ, ಯೂನಿವರ್ಸಿಟಿ ಇಲ್ಲಿ ಆಗಿದೆ. ನಾನು ಕೇಳಿದ (ಅ) ಪ್ರಶ್ನೆಗೆ 'ಹೌದು' ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿದ (ಆ) ಪ್ರಶ್ನೆಗೆ 'ಹೌದು' ಎಂದು ಉತ್ತರವನ್ನು ಕೊಟ್ಟಿದ್ದಾರೆ. ನಾನು ಕೇಳಿದ (ಇ) ಪ್ರಶ್ನೆಗೆ ಅವರು ಶಿಕ್ಷಕರ ವಿವರವನ್ನು ನೀಡಿದ್ದಾರೆ. ನಾನು ಕೇಳಿದ (ಈ) ಪ್ರಶ್ನೆಗೆ ಟೋಟಲ್ ಶಿಕ್ಷಕರೆ 17 ಮಂದಿ ಇದ್ದರೆ 10 ಜನರು ಅತಿಥಿ ಶಿಕ್ಷಕರು ಅಲ್ಲಿ

ದುಡಿಯುತ್ತಿದ್ದಾರೆ. ಈಗ ಅಲ್ಲಿ ನನ್ನನ್ನು ಅಧ್ಯಕ್ಷರನ್ನಾಗಿ ಮಾಡಿದ್ದಾರೆ. ನಾನು ಅಧ್ಯಕ್ಷನಾದ ಮೇಲೆ ಅಲ್ಲಿ ಶುರುವಾಗಿದೆ. ಬಹುಶಃ ಮಾನ್ಯ ಉಪಾಧ್ಯಕ್ಷರೆ, ಯೂನಿವರ್ಸಿಟಿ ಪಬ್ಲಿಕ್ ಸ್ಕೂಲ್ ಎಂದರೆ ಹಿಂದೆ ಆ ಕಾಲಕ್ಕೆ ಗೌರ್ನಮೆಂಟ್ ಸ್ಕೂಲ್ ಇತ್ತು, ಎ.ಕೆ.ಗರ್ಲ್ಸ್ ಹೈಸ್ಕೂಲ್. ಆಗ ನಾವುಗಳು ಶಾಲೆಗೆ ಹೋಗುವುದಕ್ಕಿಂತ ಮುಂಚೆ ಅದು ಇತ್ತು. ಇಲ್ಲಿ ಒಂದು ಸೀಟು ಸಿಗುವುದಕ್ಕೆ ಕಷ್ಟ ಇತ್ತು. ಅಡ್ಮಿಶನ್ ಸಿಗುತ್ತಿರಲಿಲ್ಲ. ಅಂಥಹ ಭಯವಿದ್ದಂತಹ, ಘನತೆ ಇದ್ದಂತಹ ಶಾಲೆಯನ್ನು ಎಲ್ಲಿಗೆ ತಂದು ಇಟ್ಟಿದ್ದಾರೆಂದರೆ, ನೀವು ಛೇರ್ಮನ್ ಆಗಿ ಕೆಲಸವನ್ನು ಮಾಡಿದ್ದೀರಿ. ಇವತ್ತು ಮಂತ್ರಿಗಳು ಸಹ ಆಗಿದ್ದೀರಿ, ಅದಕ್ಕಾಗಿ ದಯವಿಟ್ಟು ಇದನ್ನು ಮೊದಲಿನ ಸ್ಥಿತಿಗೆ ಮಾಡಬೇಕೆಂದು, ಹಾಗೂ ಬಜೆಟ್‌ನಲ್ಲಿ ಇದಕ್ಕೆ ಪ್ರಾವಿಜನ್ ಮಾಡಿಕೊಡಬೇಕು. ನೀವು ಅಲ್ಲಿ ಖಾಲಿ ಇದ್ದಾಗ ಅತಿಥಿ ಶಿಕ್ಷಕರನ್ನು ತೆಗೆದುಕೊಂಡಿದ್ದೀರಿ, ಅವರೆಲ್ಲರನ್ನು ಖಾಯಂ ಮಾಡಬೇಕು. ಅವರುಗಳು ಇಷ್ಟು ವರ್ಷಗಳ ಕಾಲ ದುಡಿದಿದ್ದಾರೆ, ಅವರಿಗೆ ಮದುವೆಯಾಗಿದೆ, ಕೆಲವರಿಗೆ ಮಕ್ಕಳಾಗಿರುವುದನ್ನು ನಾನು ನೋಡಿದ್ದೇನೆ. ಇನ್ನು ಕೆಲವರು ನೌಕರಿಯಲ್ಲಿದ್ದಾರೆಂದು ಲಗ್ನವಾಗಿದ್ದಾರೆ. ಇವರುಗಳೆಲ್ಲರೂ ಕಷ್ಟದಲ್ಲಿದ್ದಾರೆ. ಅವರನ್ನು ದಯವಿಟ್ಟು ಖಾಯಂ ಮಾಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಅದರ ಅಭಿವೃದ್ಧಿಗೆ ತಾವು ಏನು ಮಾಡುತ್ತೀರಿ? ಸುಮ್ಮನೆ ಇವರು ಏನೇನೋ ಹೇಳಿದ್ದಾರೆ, ಅದನ್ನು ನಾನು ನೋಡಿದ್ದೇನೆ. ಅಲ್ಲಿ ಎಲ್ಲಾ ಕಟ್ಟಡಗಳು ಕಟ್ಟಿದ್ದರೂ ಕೂಡ ಎಲ್ಲವೂ ಹಾಳಾಗಿ ಹೋಗಿದೆ. ಮಾನ್ಯ ಹೊರಟ್ಟಿಯವರೆ, ನಾವು ಮತ್ತು ನೀವೂ ಕೂಡ ಅಲ್ಲಿಗೆ ಒಂದು ಸಾರಿ ವಿಸಿಟ್ ಹೋಗೋಣ. ಆ ಕಾರಣದಿಂದ ನೀವು ಅಲ್ಲಿಗೆ ಈ ಸಲ ಒಂದು ಜೂನಿಯರ್ ಕಾಲೇಜನ್ನು ಕೊಡಬೇಕು. ನೀವು ಅಲ್ಲಿಗೆ ಕಾಲೇಜನ್ನು ಕೊಡುವುದರ ಮೂಲಕ ಅದನ್ನು ಬೆಳೆಸಿ ಚೆನ್ನಾಗಿ ಅದರ ಭವ್ಯತೆ ಹಿಂದೆ ಹೇಗಿತ್ತೋ, ಆ ಘನತೆಯನ್ನು ತರುವಂತಹ ಪ್ರಯತ್ನವನ್ನು ತಾವು ಮಾಡುತ್ತೀರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಬಸವರಾಜ ಹೊರಟ್ಟಿ :– ಮಾನ್ಯ ಉಪಾಧ್ಯಕ್ಷರೆ, ಇದು ವಿಶ್ವವಿದ್ಯಾನಿಲಯದಿಂದ ನಡೆಯುವಂತಹ ಪ್ರೌಢಶಾಲೆಯಾಗಿದೆ. ಇದನ್ನು ಬಿಎಡ್ ಕಾಲೇಜಿಗೆ ಒಂದು practice school ಎಂದು ತಿಳಿದುಕೊಂಡು ಎ.ಕೆ.ಗರ್ಲ್ಸ್

ಗೌರ್ನಮೆಂಟ್ ಸ್ಕೂಲ್ ಇತ್ತು, ಇದನ್ನು ಅಂದಿನ ಕುಲಪತಿಯಾದಂತಹ ಡಾ॥ ಡಿ.ಸಿ. ಪಾಟೀಲ್‌ರವರು ಇದನ್ನು ತೆಗೆದುಕೊಂಡು ಮಾಡರ್ನ್ ಶಾಲೆಯನ್ನಾಗಿ ಮಾಡಬೇಕೆಂದು ತೀರ್ಮಾನ ಮಾಡಿದರು. ನಾನು ಇಲ್ಲಿ 4 ಟರ್ಮ್‌ಗಳ ಕಾಲ ಅಧ್ಯಕ್ಷನಾಗಿ ಕೆಲಸವನ್ನು ಮಾಡಿದ್ದೇನೆ. ಅದಕ್ಕೆಲ್ಲಾ ಸರ್ವತೋಮುಖ ಅಭಿವೃದ್ಧಿಯನ್ನು ಮಾಡಿದ್ದೇವೆ. ಈಗ ಏನಾಗಿದೆ ಎಂದರೆ, ಹಣಕಾಸಿನ ತೊಂದರೆ ಇದೆ. ಇದು ಸರ್ಕಾರದ್ದು ಅಲ್ಲ, ಮತ್ತು ಖಾಸಗಿಯದ್ದೂ ಅಲ್ಲ. ವಿಶ್ವವಿದ್ಯಾನಿಲಯದವರು ನಡೆಸುತ್ತಿದ್ದಾರೆ. ಅವರೇ ಇದಕ್ಕೆ ಗ್ರಾಂಟ್‌ನ್ನು ಕೊಡಬೇಕಾಗುತ್ತದೆ. ಒಟ್ಟು 32 ಜನ ಟೀಚರ್ಸ್‌ಗಳು ಅಲ್ಲಿ ಪೋಸ್ಟ್ ಇದ್ದಂತಹ ಶಾಲೆಯಾಗಿದೆ. ಅಲ್ಲಿ 21 ಜನರು ಕೆಲಸವನ್ನು ಮಾಡುತ್ತಾರೆ. ಅಲ್ಲಿ 11 ಜನ ಖಾಲಿ ಇದ್ದಾರೆ. 10 ಜನರನ್ನು ಗೆಸ್ಟ್ ಟೀಚರ್ ಎಂದು ಅಪಾಯಿಂಟ್ ಮಾಡಿದ್ದಾರೆ. ಈ ಅಪಾಯಿಂಟ್ ಮಾಡಿ 2007ನೇ ಇಸವಿಗೆ 82,67,500 ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇದನ್ನು ವಿಶ್ವವಿದ್ಯಾನಿಲಯದವರೇ ಮಾಡಬೇಕು. ಹೀಗಾಗಿ ನೇಮಕಾತಿಯನ್ನು ಮಾಡುವಂತಹ ಅಧಿಕಾರ ಅದು ಸಹ ವಿಶ್ವವಿದ್ಯಾನಿಲಯಕ್ಕೆ ಇದೆ. ಇದು ಸರ್ಕಾರಕ್ಕೆ ಸಂಬಂಧ ಬರುವುದಿಲ್ಲ. ಈ ದಿಸೆಯಲ್ಲಿ ಆರ್ಥಿಕ ಮಿತವ್ಯಯದ ಆದೇಶವಿರುವುದರಿಂದ ಇದಕ್ಕೆ ಅನುಮತಿಯನ್ನು ಕೊಟ್ಟಿರಲಿಲ್ಲ. ಅದನ್ನು ಸರ್ಕಾರದವರು ಈಗ ಹಿಂತೆಗೆದುಕೊಂಡಿದ್ದಾರೆ. ತೆಗೆದುಕೊಂಡ ನಂತರ ಇದನ್ನು ನಿಯಮದ ಪ್ರಕಾರ ಮಾಡಬೇಕು. ಇದಕ್ಕೆ ಸಿಂಡಿಕೇಟ್‌ನವರು ಈ ಬಗ್ಗೆ ರೆಸಲ್ಯೂಷನ್‌ನ್ನು ಮಾಡಿ ಇದನ್ನು ಖಾಯಂ ಮಾಡಬೇಕೆಂದು ಕಳುಹಿಸಿದರೆ ಸರ್ಕಾರವು ಇದನ್ನು ಪರಿಶೀಲಿಸಿ ಅವರನ್ನು ಖಾಯಂ ಮಾಡುವಂತಹ ಕೆಲಸವನ್ನು ಮಾಡುತ್ತದೆ. ಅಲ್ಲಿಯವರೆಗೆ ಇವರಿಗೆ ಇದೇ ರೀತಿಯಾಗಿ ಮಕ್ಕಳಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಇವರನ್ನು ಅತಿಥಿ ಶಿಕ್ಷಕರೆಂದು ಮುಂದುವರೆಸುತ್ತೇವೆ. ಇವರನ್ನು ನೌಕರಿಯಿಂದ ತೆಗೆಯುವುದಿಲ್ಲ. ಯಾವಾಗ ಸಿಂಡಿಕೇಟ್‌ನವರು ರೆಸಲ್ಯೂಷನ್ ಮಾಡಿ ಕಳುಹಿಸುತ್ತಾರೋ, ಆಗ ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ :– ಈಗ ಅವರಿಗೆ 2000 ದಿಂದ 3000 ಪಗಾರವನ್ನು ಕೊಡುತ್ತಿದ್ದಾರೆ. ಅವರುಗಳು ಖಾಯಂ ಆಗುವವರೆಗೆ ಅವರಿಗೆ ಸರ್ಕಾರಿ ಸ್ಕೇಲ್ ಪ್ರಕಾರ ಪಗಾರವನ್ನು ಕೊಡುತ್ತೀರಾ ಎಂದು ಹೇಳಬೇಕು. ಕೇವಲ ಹಳ್ಳಿಗಳಲ್ಲಿ ದುಡಿಯುವವರಿಗೆ 50 ರೂಪಾಯಿಗಳನ್ನು ಕೊಡುತ್ತಾರೆ. ಅವರಿಗೆ 2000–3000 ರೂ.ಗಳವರೆಗೆ ಪಗಾರವನ್ನು ಕೊಡುತ್ತಾರೆ. ಅವರು ಹೇಗೆ ಮಕ್ಕಳಿಗೆ ಪಾಠವನ್ನು ಹೇಳಿ ಕೊಡುತ್ತಾರೆ?

ಉಪಾಧ್ಯಕ್ಷರು :– ಮಾನ್ಯ ಸಚಿವರು ಏನು ಹೇಳುತ್ತಾರೋ ಅದನ್ನು ಕೇಳೋಣ.

ಶ್ರೀ ಬಸವರಾಜ ಹೊರಟ್ಟಿ :– ಸರ್ಕಾರದಲ್ಲಿ ಒಂದು ಕಾನೂನು ಇದೆ. ಯಾವುದೇ ಒಬ್ಬ ಖಾಸಗಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಬೇಕಾದರೆ ಅದರಲ್ಲಿ ಎರಡು ತರಹ ಇದೆ. ಒಂದು ಕಾಂಟ್ರಾಕ್ಟ್ ಮೇಲೆ ಮಾಡಿಕೊಳ್ಳುತ್ತಾರೆ. ಇನ್ನೊಂದು ಗೆಸ್ಟ್ ಲೆಕ್ಚರರ್ ಎಂದು ಮಾಡಿಕೊಳ್ಳುತ್ತಾರೆ. ಅತಿಥಿ ಟೀಚರ್ಸ್ ಎಂದರೆ, ಎಷ್ಟು ಪೀರಿಯಡ್ ಪಾಠವನ್ನು ಕಲಿಸುತ್ತಾರೆ, ಅದರ ಮೇಲೆ ಒಂದು ಪೀರಿಯಡ್‌ಗೆ ಇಷ್ಟು ಎಂದು ಇದೆ. ಇವರನ್ನು ಅತಿಥಿ ಶಿಕ್ಷಕರೆಂದು ನೇಮಕ ಮಾಡಿಕೊಂಡಿರುವುದರಿಂದ ಈ ಸಮಸ್ಯೆ ಉದ್ಭವವಾಗಿದೆ. ಇವರನ್ನು ಕಂಟ್ರಾಕ್ಟ್ ಟೀಚರ್ ಎಂದು ನೇಮಕ ಮಾಡಿಕೊಂಡಿದ್ದರೆ, ಬೇಸಿಕ್ ಸ್ಯಾಲರಿಗಿಂತ 10 ರೂಪಾಯಿ ಕಡಿಮೆ ಕೊಡುವಂತಹ ಪದ್ಧತಿ ಇರುತ್ತಿತ್ತು. ನೇಮಕಾತಿಯನ್ನು ಮಾಡಿಕೊಳ್ಳುವಾಗ ಯೂನಿವರ್ಸಿಟಿಯವರು ತಪ್ಪು ಮಾಡಿರುವುದರಿಂದ ಈ ಬಗ್ಗೆ ಮಾನ್ಯ ಸದಸ್ಯರು ಹೇಳುವಂತೆ ಅದನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನೇಮಕಾತಿಯನ್ನು ಬದಲಾವಣೆ ಮಾಡಿ ವಿಶ್ವವಿದ್ಯಾನಿಲಯದವರು ಕಳುಹಿಸಿದರೆ ಆಗ ಇವರಿಗೆ ಸಂಬಳವನ್ನು ಹೆಚ್ಚು ಮಾಡುವುದಕ್ಕೆ ಬರುತ್ತದೆಯೇ ವಿನಃ ಈಗ ಇದ್ದಂತಹ ಪರಿಸ್ಥಿತಿಯಲ್ಲಿ ಹೆಚ್ಚು ಮಾಡುವುದಕ್ಕೆ ಬರುವುದಿಲ್ಲ.

ಉಪಾಧ್ಯಕ್ಷರು :– ಶ್ರೀ ಭರಮಗೌಡ(ರಾಜು) ಅಲಗೌಡ ಕಾಗೆ ಯವರ ಪ್ರಶ್ನೆ ಸಂಖ್ಯೆ : 1907 ಅವರು ಸದನದಲ್ಲಿ ಇಲ್ಲ.